ಬೃಹತ್ ನೀರು ಸರಬರಾಜು ಯೋಜನೆ

೧೭೪೪. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳ್ತಂಗಡಿ ತಾಲ್ಲೂಕಿನ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಬೃಹತ್ ನೀರು ಸರಬರಾಜು ಯೋಜನೆ ಮಂಜೂರಾಗಿದ್ದರೂ ಈ ಯೋಜನೆ ಕಾರ್ಯರೂಪಕ್ಕೆ ತರಲು ವಿಳಂಬವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಒಳಚರಂಡಿ ಯೋಜನೆ ಮಂಜೂರಾಗಿದೆಯೇ?

ಇ) ಹಾಗಿದ್ದಲ್ಲಿ ಈ ಯೋಜನೆಯನ್ನು ಯಾವಾಗ ಮತ್ತು ಎಷ್ಟು ಸಮಯದೊಳಗೆ ಕಾರ್ಯಗತ ಗೊಳಿಸಲಾಗುವುದು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).—

ಅ) ವಿಳಂಬವಾಗಿಲ್ಲ. ಕೆಲಸ ಪ್ರಗತಿಯಲ್ಲಿದ್ದು ೧೯೮೭–೮೮ನೇ ಸಾಲಿನಲ್ಲಿ ಸಂಪೂರ್ಣಗೊಳಿಸುವ ನಿರೀಕ್ಷೆ ಇದೆ.

ಆ) ಮಂಜೂರಾಗಿದೆ.

ಇ) ಈ ಯೋಜನೆಯು ೧೯೮೨ರಲ್ಲಿ ಪೂರ್ಣಗೊಂಡು ಚಾಲನೆಯಲ್ಲಿದೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ ರಚಿಸುವ ಬಗ್ಗೆ

೧೧೯೭. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನಕೋಟೆ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಆಹಾರ, ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಅಭಿವೃದ್ಧಿ ಪ್ರಾಧಿಕಾರ ರಚಿಸಲು ಸರ್ಕಾರ ಉದ್ದೇಶಿಸಿದೆಯೆ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ, ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಅ)ಮತ್ತು ಆ) ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ಮಸೂದೆಯೊಂದನ್ನು ಸರ್ಕಾರವು ದಿನಾಂಕ ೫–೨–೧೯೮೭ರಂದು ವಿಧಾನ ಮಂಡಲದಲ್ಲಿ ಮಂಡಿಸಲಾಗಿದೆ. ಈ ಮಸೂದೆ ಕಾನೂನು ಆದ ನಂತರ ಮೈಸೂರು ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲು ಪರಿಶೀಲಿಸಲಾಗುವುದು.

ಗೃಹ ನಿರ್ಮಾಣ ನಿಗದಿಪಡಿಸಿದ ಮೌಲ್ಯಕ್ಕೆ ಜಾಸ್ತಿ ಹಣ ವಸೂಲಿ ಬಗ್ಗೆ

೧೯೪. ಶ್ರೀ ಗೋಪಾಲ ಮಂಕಂದ ಕಾನಡೆ (ಸಿರ್ಸಿ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಗೃಹ ನಿರ್ಮಾಣ ಮಂಡಳಿಯಿಂದ ೧೯೮೪–೮೫ರಲ್ಲಿ ಒಂದು ಮನೆಗೆ ನಿಗದಿಪಡಿಸಿದ ಬೆಲೆ ಎಷ್ಟು ?

ಆ) ೧೯೮೬ನೇ ಸಾಲಿನಲ್ಲಿ ಯಾವ ಯಾವ ಇಲಾಖೆಯವರಿಗೆ ಮಂಜೂರು ಮಾಡಲಾಗಿದೆ?

ಇ) ೧೯೮೪ನೇ ಸಾಲಿನಿಂದ ೧೯೮೭ರ ವರೆಗೆ ರಾಜ್ಯದಲ್ಲಿ ಒಟ್ಟು ಎಷ್ಟು ನಿವೇಶನಗಳನ್ನು ಹಂಚಲಾಗಿದೆ. ಹಾಗೂ ಯಾವ ಬೆಲೆಗೆ ಹಂಚಲಾಗಿದೆ. ಯಾವ ಯಾವ ವರ್ಷ ಯಾವ ಯಾವ ಬೆಲೆಗೆ ಹಂಚಿದ್ದೀರಿ ?